# ಬಿಡುವೆನೇನಯ್ಯಾ ಹನುಮ ಬಿಡುವೆನೇನಯ್ಯಾ

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
2. **Note:** Singer has followed these wordings.

ರಾಗ: ನಾದನಾಮಕ್ರಿಯೆ ತಾಳ: ಆದಿ

ಬಿಡುವೆನೇನಯ್ಯಾ ಹನುಮ ಬಿಡುವೆನೇನಯ್ಯಾ
ನಾ ಸುಮ್ಮನೆ ಬಿಡುವೆನೇನಯ್ಯಾ

ಬಿಡುವೆನೇನೋ ಹನುಮಾ ನಿನ್ನ
ಅಡಿಗಳಿಗೆ ಶಿರವಾ ಕಟ್ಟಿ
ಒಡೆಯನಲ್ಲಿ ಜ್ಞಾನ ಭಕ್ತಿಯನೆನಗೆ
ಕೊಡುವ ತನಕ ಸುಮ್ಮನೆ ನಿನ್ನ ॥ ೧ ॥

ಹಸ್ತವನೆತ್ತಿದರೇನು
ಹಾರಾಕಾಲನು ಇಟ್ಟರೇನು
ಭೃತ್ಯನು ನಿನ್ನವನು ನಾನು
ಹಸ್ತಿ ವರದನ ತೋರುವ ತನಕ ॥ ೨ ॥

ಹಲ್ಲು ಮುಡಿಯ ಕಚ್ಚಿದರೇನು
ಅಂಜುವೆನೆ ನಿನಗೆ ನಾನು
ಫುಲ್ಲನಾಭನಲ್ಲಿ ಎನ್ನ
ಮನಸ ನೀ ನಿಲ್ಲಿಸೊ ತನಕ ॥ ೩ ॥

ಡೊಂಕು ಮೋರೆ ಬಾಲವ ತಿದ್ದಿ
ಹೂಂಕರಿಸಿದರೆ ಅಂಜುವನಲ್ಲ
ಕಿಂಕರಾ ನಿನ್ನವನು ನಾನು

ಪುರಂದರ ವಿಠಲನ ತೋರುವ ತನಕ || ೪ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಒಡೆಯನಲ್ಲಿ** – ಸರ್ವೋತ್ತಮನಾದ ಹರಿಯಲ್ಲಿ.

**ಹಸ್ತಿ ವರದನ** – ಗಜೇಂದ್ರ ಮೋಕ್ಷದ ಹಿನ್ನೆಲೆ.

**ಕಿಂಕಾರಾ** – ಕಿಂಕರ, ಸೇವಕ.

**ಭೃತ್ಯ** = ಸೇವಕ

**Classification:** Keerthane
**Ankita:** purandara vittala
**Location:** NA
**Category:** Hanuma Stuti
**Sub-Category:** hanuma, jnana, bhakti, bhaya, Vishnu,
**Pravachana:** NA
**Explanation:** NA